ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆ ಬಹಳ ಉತ್ತಮವಾಗಿದೆ. ಈಗಾಗಲೇ ಈ ನಿಟ್ಟಿನಲ್ಲಿ ಕ್ರಮತೆಗೆದುಕೊಂಡು 13 ಜಿಲ್ಲೆಗಳಲ್ಲಿ ಅಂಥ ಸಭೆಗಳನ್ನು ಮಾಡಿಯಾಗಿದೆ. ತಮ್ಮ ಜಿಲ್ಲೆಯಲ್ಲೂ ಕಾರ್ಯಕ್ರಮವನ್ನಿಟ್ಟು ಕೊಂಡು ಮಾಡುತ್ತಿದ್ದೇವೆ. ಬಸ್ಸಿನ ಟಾಪ್ ಮೇಲೆ ಪ್ರಯಾಣ ಮಾಡುತ್ತಿರುವ ಬಗ್ಗೆ ಹೇಳುವುದಾದರೆ ಈ ಸಮಸ್ಯೆ ಕೇವಲ ಮಂಡ್ಯ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ, ಇಡೀ ರಾಜ್ಯದಲ್ಲಿದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಹೆಚ್ಚು ಹೆಚ್ಚು ಬಸ್ಸುಗಳನ್ನು ಹಾಕಲು ಯತ್ನಿಸುತ್ತಿದ್ದೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಆ ಬಸ್ಸುಗಳನ್ನು ನೋಡಲು ಆಗುವುದಿಲ್ಲ. ಬಸನ ಟಾಮ್ ಮೇಲೆ ಪ್ರಯಾಣ ಮಾಡುವುದನ್ನು ತಪ್ಪಿಸುವುದಕೋಸ್ಕರ ಸರ್ಕಾರ ಹೆಚ್ಚು ಬಸ್ಸುಗಳನ್ನು ಹಾಕಬೇಕು, ಇಲ್ಲದಿದ್ದರೆ ಜನರು ರೊಚ್ಚಿಗೇಳುತ್ತಾರೆ, ಅವರ ಪ್ರಾಣಹಾನಿಯನ್ನು ಸರ್ಕಾರವೇ ಮಾಡಿದಂತಾಗುತ್ತದೆ.

ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯವ್ಯಾಪ್ತಿ

108 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯ ವ್ಯಾಪ್ತಿಯಲ್ಲಿ ಯಾವ ಯಾವ ಜಿಲ್ಲೆಗಳು ಒಳಗೊಂಡಿರುತ್ತದೆ ಮತ್ತು ಮಂಡಳಿಯ ಕೆಲಸ ಕಾರ್ಯಗಳ ವ್ಯಾಪ್ತಿ ಏನು?

ಆ) 1995-96ನೇ ಸಾಲಿಗಾಗಿ ಸದರಿ ಮಂಡಳಿಗೆ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ ಮತ್ತು ಈ ಹಣವನ್ನು ಯಾವ ಯಾವ ಕೆಲಸಗಳಿಗಾಗಿ ವಿನಿಯೋಗಿಸಲಾಗುವುದು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದ ಎಂಟು ಜಿಲ್ಲೆಗಳು ಪೂರ್ಣವಾಗಿ ಅಥವಾ ಭಾಗಶಃ ಈ ಮಂಡಳಿಯ ವ್ಯಾಪ್ತಿಗೆ ಒಳಪಡುತ್ತದೆ. ಇವುಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆಗಳು
1.	ಬೆಂಗಳೂರು (ಗ್ರಾಮಾಂತರ)
2.	ತುಮಕೂರು.
3.	ಹಾಸನ.
4.	ಹಾಸನ.
5.	ಚಿತ್ರದುರ್ಗ.
6.	ಧಾರವಾಡ.

7. ಬೆಳಗಾಂ.

8. ಬಿಜಾಪುರ.

ಮಂಡಳಿಯ ಕೆಲಸ ಕಾರ್ಯಗಳ ವಿವರಗಳು ಈ ರೀತಿ ಇದೆ :

1. ಬಯಲು ಸೀಮೆ ಜಲಮೂಲಗಳ ಅಭಿವೃದ್ಧಿ ಮತ್ತು ಸಂರಕ್ಷಣೆ ಪ್ರೋತ್ಸಾಹ ನೀಡುವುದು.
2. ಬಯಲು ಸೀಮೆ ಮಳೆ ಆಧಾರಿತ ಕೃಷಿ ಪದ್ಧತಿಗಳ ಭೂಸಾರ ಮತ್ತು ಜಲಸಂರಕ್ಷಣೆ ಕ್ರಮಗಳನ್ನು ಅಳವಡಿಸಿಕೊಳ್ಳುವುದು.
3. ಬಯಲು ಸೀಮೆಯಲ್ಲಿ ಅರಣ್ಯಾಭಿವೃದ್ಧಿಗೆ ಉತ್ತೇಜನ ನೀಡುವುದು.
4. ಬಯಲು ಸೀಮೆಯಲ್ಲಿ ತೋಟಗಾರಿಕೆ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದು.
5. ಬಯಲು ಸೀಮೆಯಲ್ಲಿ ಕೃಷಿ ಮತ್ತು ತತ್ಸಬಂಧಿ ವಲಯಗಳಲ್ಲಿನ ಚಟುವಟಿಕೆಗಳಿಗೆ ಉತ್ತೇಜಸುವುದು ಮತ್ತು ನೆರವು ನೀಡುವುದು.
6. ಬಯಲು ಸೀಮೆಯ ಪ್ರದೇಶದಲ್ಲಿ ಪಶು-ಸಂಗೋಪನೆಗೆ ಉತ್ತೇಜನ ನೀಡುವುದು.

ಆ) ಸದರಿ ಮಂಡಳಿಗೆ 1995-96ನೇ ಸಾಲಿಗಾಗಿ ಯೋಜನಾ ಲೆಕ್ಕ ಶಿರ್ಷಿಕೆಯಡಿ 381.00 ಲಕ್ಷ ರೂ.ಗಳನ್ನು ವಿಶೇಷ ಘಟಕ ಯೋಜನೆಯಡಿ 173.00 ಲಕ್ಷ ರೂ.ಗಳನ್ನು ಹಾಗೂ ಗಿರಿಜನ ಉಪಯೋಜನೆಯಲ್ಲಿ 43.00 ಲಕ್ಷ ರೂ.ಗಳನ್ನು ಅಂದರೆ ಒಟ್ಟು 5.97 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಇದರ ಪೈಕಿ ವಿಶೇಷಘಟಕ ಯೋಜನೆಯಡಿ ಒದಗಿಸಲಾಗಿದ್ದ 173.00 ಲಕ್ಷ ರೂ.ಗಳ ಪೈಕಿ 100.00 ಲಕ್ಷ ರೂ.ಗಳನ್ನು ಕ್ರೋಢಿಕರಿಸುವ ದೃಷ್ಟಿಯಿಂದ ಹಿಂದಕ್ಕೆ ಪಡೆಯಲಾಗಿದೆ.

ಮಂಡಳಿಯವತಿಯಿಂದ ಕೈಗೊಳ್ಳ ಬೇಕಾಗಿರುವ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಕ್ರಿಯಾ ಯೋಜನೆಯನ್ನು ತಯಾರಿಸಿ ಮಂಡಳಿಗೆ ಕಳುಹಿಸುವಂತೆ ಈಗಾಗಲೇ ಎಲ್ಲಾ ಜಿಲ್ಲಾ ಪಂಚಾಯತಿಯು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೂ ಹಾಗೂ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಸೂಚನೆ ನೀಡಲಾಗಿದ್ದು ಇದನ್ನು ಮಂಡಳಿಯ ಅನುಮೋದನೆ ಪಡೆಯುವ ಮೂಲಕ ಅನುಷ್ಠಾನಗೊಳಿಸಲಾಗುವುದು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಒದಗಿಸಿರುವ ಉತ್ತರದಲ್ಲಿ 1995-96ನೇ ಸಾಲಿಗಾಗಿ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ 5 ಕೋಟಿ 97 ಲಕ್ಷ ರೂಪಾಯಿಗಳನ್ನು ಅಭಿವೃದ್ಧಿಯ ಸಲುವಾಗಿ ನಿಗದಿಪಡಿಸಿದ್ದಾರೆ. ಆದರೆ ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಎಂಟು ಜಿಲ್ಲೆಯ ಐವತ್ತೇಳು ತಾಲ್ಲೂಕುಗಳು ಒಳಪಡುತ್ತಿವೆ. ಅಂದರೆ ರಾಜ್ಯದ ಕ್ಷೇತ್ರವಾರು ಲೆಕ್ಕ ಹಾಕಿದರೆ ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಅಡಿಯಲ್ಲಿ ರಾಜ್ಯದ ಒಂದನೆ ಮೂರರಷ್ಟು, ಮೂವತ್ತಮೂರು ಪರಸೆಂಟ್ ಕ್ಷೇತ್ರವು ಬರುತ್ತದೆ. ಈ ಬಯಲು ಸೀಮೆಯ ಅಭಿವೃದ್ಧಿ ಮಂಡಳಿಯನ್ನು ಇತರ ಸೀಮಮೆಗಳ ಅಭಿವೃದ್ಧಿ ಮಂಡಳಿಗಳೊಂದಿಗೆ ಹೋಲಿಕೆ ಮಾಡಿದರೆ

ಉದಾಹರಣೆಗೆ ಹೈದರಾಬಾದ್ ಕರ್ನಾಟಕ ಆರವತ್ತು ಕೋಟಿ ರೂಪಾಯಿಗಳನ್ನು ಅಭಿವೃದ್ಧಿಯ ಸಲುವಾಗಿ ನಿಗದಿ ಪಡಿಸಲಾಗಿದೆ. ಹಾಗೆಯೆ, ಮಲೆನಾಡು ಅಭಿವೃದ್ಧಿ ಮಂಡಳಿಗೆ ಇಪ್ಪತ್ತೇಳು ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಆದ್ದರಿಂದ, ಬಯಲು ಸೀಮೆಯ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಬರತಕ್ಕಂಥ ಕ್ಷೇತ್ರಗಳ ನಿಜವಾದ ಅಭಿವೃದ್ಧಿ ಮಾಡುವ ದೃಷ್ಟಿಯಿಂದ, ಒಂದೊಂದು ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿಗಳಿಂದರೂ ಐವತ್ತೇಳು ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದರೆ ಆದರಿಂದ ಪರಿಪೂರ್ಣವಾದ ಅಭಿವೃದ್ಧಿಯನ್ನು ಮಾಡಲು ಸಾಧ್ಯವಾಗುತ್ತದೆ. ಅಲ್ಲಿ ಅಭಿವೃದ್ಧಿಯನ್ನು ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ಸರ್ಕಾರ ದಯವಿಟ್ಟು ಹೆಚ್ಚು ಹಣವನ್ನು ಬಯಲು ಸೀಮೆಯ ಅಭಿವೃದ್ಧಿ ಮಂಡಳಿಗೆ ಒದಗಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಉತ್ತರವನ್ನು ಕೊಡಲು ನನಗೆ ಬಹಳ ಸಂತೋಷವಾಗುತ್ತದೆ. ಏಕೆಂದರೆ ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಯು ನನ್ "ಕನಸಿನ ಕೂಸು". ಇಂಥ ಮಂಡಳಿಯನ್ನು ರಚನೆ ಮಾಡಬೇಕೆಂದು ನಾನು ಬಹಳ ದಿವಸಗಳಿಂದಲು ಹೊರಾಟ ಮಾಡುತ್ತಿದ್ದೆ. ಈಗ ಈ ಮಂಡಳಿ ರಚನೆಯೂ ಆಗಿದೆ ಮತ್ತು ಇದನ್ನು ಕಾರ್ಯಗತ ಮಾಡತಕ್ಕ ಜವಾಬ್ದಾರಿಯೂ ನನ್ನ ಮೇಲೆ ಒದಗಿದೆ. ಈ ಪ್ರಶ್ನೆಗೆ ಉತ್ತರಿಸಲು ಸಂತೋಷವಾಗುತ್ತದೆಂದು ಆದ್ದರಿಂದಲೇ ನಾನು ಹೇಳಿದ್ದು. ಮಾನ್ಯ ಸದಸ್ಯರೇನು ಹಣದ ಕೊರತೆಯ ಬಗ್ಗೆ ಹೇಳಿದ್ದಾರೆ ಅದು ನಿಜವಾದುದು. ಈ ಮಂಡಳಿಗೆ ಒದಗಿಸಿರತಕ್ಕ ಹಣವು "ಬಕಾಸುರ ಹೊಟ್ಟೆಗೆ ಆರೆ ಕಾಸಿನ ಮಜ್ಜಿಗೆಯನ್ನು ಹಾಕಿದಂತಿದೆ." ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳ ಮತ್ತು ಹಣಕಾಸು ಸಚಿವರ ಗಮನಕ್ಕೆ ತಂದು ಈ ವರ್ಷದ ಬಜೆಟನಲ್ಲಿ ಇಟ್ಟಿರತಕ್ಕ ಹಣದ ಬಗ್ಗೆ ಹೇಳಿದ್ದೇವೆ. ಮುಂಬರತಕ್ಕ ವರ್ಷದಲ್ಲಿ ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಬಜೆಟನಲ್ಲಿ ಇಡಲು ಪ್ರಯತ್ನ ಪಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀಮತಿ ಎನ್. ಜ್ಯೋತಿ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಗೌರಿಬಿದನೂರು ತಾಲ್ಲೂಕನ್ನು ಬಿಟ್ಟು ಬಿಟ್ಟಿರುವುದು ನನ್ನ ಗಮನಕ್ಕೆ ಬಂದಿದೆ. ನಮ್ಮ ಕ್ಷೇತ್ರದಲ್ಲಿ ದುರ್ದೈವದಿಂದ ಒಂದು ಸಕ್ಕರೆ ಕಾರ್ಖಾನೆ ಇರುವುದರಿಂದ ಅದು ಸಮೃದ್ಧಿಯಾದ ತಾಲ್ಲೂಕು ಎನ್ನತಕ್ಕ ಉದ್ದೇಶದಿಂದ ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಿಂದ ಕೈಬಿಟ್ಟಿದ್ದಾರೆ. ಬೇಕಾದರೆ ಆ ಸಕ್ಕರೆ ಕಾರ್ಖಾನೆಯನ್ನು ಮುಚ್ಚಿಬಿಡಿ, ಆದರೆ ಗೌರಿಬಿದನೂರು ತಾಲ್ಲೂಕನ್ನು ಬಯಲುಸೀಮೆ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಸೇರಿಸಬೇಕೆಂದು ಕೃಷಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ನಿಮಗೆ ಈಗ ದೆಸೆ ಬಂದಿದೆ, ಸುದ್ದೆವ ಬಂದಿದೆ ತಮ್ಮ ಭಾಗದವರೇ ಮಂತ್ರಿಗಳು ಬಂದಿದ್ದಾರೆ ಅವರು ತಮ್ಮ ಕ್ಷೇತ್ರವನ್ನು ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಸೇರಿಸುತ್ತಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮೂಲ ಆಕ್ಟ್‌ನಲ್ಲಿ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಯಾವ್ಯಾವ ತಾಲ್ಲೂಕುಗಳು ಇರಬೇಕು ಎಂಬ ಬಗ್ಗೆ ನಮೂದಿಸಿದ್ದಾರೆ. ಇದಕ್ಕೆ ವೈಜ್ಞಾನಿಕವಾದಂಥ ಆಧಾರವೂ ಸಹ ಇದೆ. ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಮೂವತ್ತು ಪರಸೆಂಟನಷ್ಟು ಅಶ್ಯೂರ್ಡ್ ಇರಿಗೇಷನ್‌ಗಿಂತ ಕಡಿಮೆ ಇರತಕ್ಕ ಎಳುನೂರಾ ಐವತ್ತು ಮಿಲಿಮೀಟರ್‌ಗಿಂತ ಕಡಿಮೆ ಮಳೆ ಬೀಳತಕ್ಕ ತಾಲ್ಲೂಕುಗಳನ್ನು ಮಾತ್ರ ಸೇರಿಸಲಾಗಿದೆ. ಮಾನ್ಯ ಜ್ಯೋತಿರೆಡ್ಡಿಯವರಲ್ಲದೆ ಬಹಳ ಜನ ಸದಸ್ಯರುಗಳು ತಮ್ಮತಾಲ್ಲೂಕುಗಳನ್ನು ಇದರಲ್ಲಿ ಸೇರಿಸಬೇಕೆಂದು ಬೇಡಿಕೆ ಸಲ್ಲಿಸುತ್ತಿದ್ದಾರೆ. ಆದರೆ ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಯಾವ್ಯಾವ ತಾಲ್ಲೂಕುಗಳು ಇರಬೇಕು ಎಂಬುದನ್ನು ನಿಗಧಿಪಡಿಸಿದ್ದಾರೆ. ಮೂಲ ಕಾನೂನಿಗೆ ತಿದ್ದುಪಡಿ ತರಬೇಕಾದ ಅವಶ್ಯಕತೆ ಇರುವುದರಿಂದ ಅವರ ತಾಲ್ಲೂಕನ್ನು ಇದರಲ್ಲಿ ಸೇರಿಸುತ್ತೇನೆ ಎಂದು ಭರವಸೆಯನ್ನು ಇದರಲ್ಲಿ ಸೇರಿಸುತ್ತೇನೆ ಎಂದು ಭರವಸೆಯನ್ನು ಕೊಡಲು ಸಾಧ್ಯವಿಲ್ಲ, ಆದರೆ ಮೂಲ ಕಾನೂನಿಗೆ ತಿದ್ದುಪಡಿಯನ್ನು ತರುವ ಬಗ್ಗೆ ಪ್ರಯತ್ನ ಮಾಡುತ್ತೇನೆ ಎಂದಷ್ಟೇ ಹೇಳುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮೂಲ ಕಾನೂನಿಗೆ ತಿದ್ದುಪಡಿಯನ್ನು ಮಾಡಿ ಇತರೆ ತಾಲ್ಲೂಕುಗಳನ್ನು ಸೇರಿಸಬೇಕಾಗುತ್ತದೆ. ಆ ಮೂಲ ಕಾನೂನಿಗೆ ತಿದ್ದುಪಡಿ ಸೂಚನೆಯನ್ನು ಇಲ್ಲಿ ಮಾನ್ಯ ಮಂತ್ರಿಗಳು ಮಂಡಿಸಬಹುದು. ಏಕೆಂದರೆ, ಇವರು ಯಾವಾಗಲೋ ಸರ್ವೆ ಮಾಡಿದ್ದಾರೆ, ಇವರು ಯಾವ ರೀತಿಯಲ್ಲಿ ಸರ್ವೆ ಮಾಡುತ್ತಾರೆಂದು ನಮಗೆಲ್ಲ ಗೊತ್ತೇ ಇದೆ. ಅವರು ಅಂದು ಮಾಡಿರುವ ಸರ್ವೆಯ ಪ್ರಕಾರ ಗೌರಿಬಿದನೂರು ತಾಲ್ಲೂಕನ್ನು ಕೈಬಿಟ್ಟಿದ್ದಾರೆ. ಆ ರೀತಿ ಮಾಡಿರುವುದು ಸರಿಯಲ್ಲ. ಆದ್ದರಿಂದ ಗೌರಿಬಿದನೂರು ತಾಲ್ಲೂಕನ್ನು ಬಯಲುಸೀಮೆ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಸೇರಿಸಬೇಕಾದರೆ ಮೂಲ ಕಾಯಿದೆಗೆ ತಿದ್ದುಪಡಿಯನ್ನು ತರಲೇಬೇಕಾಗಿದೆ. ಆ ತಿದ್ದುಪಡಿ ಸೂಚನೆಯನ್ನು ಇದೇ ಸದನದಲ್ಲಿ ಈ ಅಧಿವೇಶನದಲ್ಲೇ ಮಾನ್ಯ ಸಚಿವರು ತರಬೇಕೆಂದು ನನ್ನ ಒತ್ತಾಯ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಎಕ್ಸ್‌ಮಿನಿಸ್ಟ್ರಿ ಸೀರೀಸ್‌ನಲ್ಲಿ ಕಾರ್ಯದರ್ಶಿ ಮಂತ್ರಿಗಳಿಗೆ ಅಂಡರ್ ಕನ್‌ಸಿಡರೇಷನ್ ಎಂದು ಬರೆದು ಕೊಡುತ್ತಾರೆ. ಇನ್ನೊಂದು ದಿವಸ ಅಂಡರ್ ಆಕ್ಟೀವ್ ಕನ್‌ಸಿಡರೇಷನ್ ಎಂದು ಬರೆದು ಕೊಡುತ್ತಾರೆ. ಆಗ ಅಧ್ಯಕ್ಷರು what is the difference between consideration and active consideration ಎಂದು ಕೇಳುತ್ತಾರೆ, ಆಗ ಕನ್‌ಸಿಡ್ರೇಷನ್ ಎಂದರೆ ಪೈಲ್ ಇಲ್ಲ, ಆಕ್ಟೀವ್ ಕನ್‌ಸಿಡ್ರೇಷನ್ ಎಂದರೆ ಫೈಲ್ ಇದೆಯೆಂದು ಹೇಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ಆ ಪ್ರಶ್ನೆ ಮುಖ್ಯವಲ್ಲ. ಇಡೀ ಕೋಲಾರ ಜಿಲ್ಲೆಯಲ್ಲಿ ಗೌರಿಬಿದನೂರು ಒಂದೇ ಒಂದು ತಾಲ್ಲೂಕು ಕೈಬಿಟ್ಟುಹೋಗಿದೆ. ಆದ್ದರಿಂದ ದಯಮಾಡಿ ಮಾನ್ಯ ಕೃಷಿ

ಸಚಿವರು ಆಕ್ಟೀವ್ ಕನ್‌ಸಿಡ್ರೇಷನ್ ಎಂದು ಅಲ್ಲದೆ ಈ ಅಧಿವೇಶನದಲ್ಲಿಯೇ ಮೂಲ ಕಾನೂನಿಗೆ ತಿದ್ದುಪಡಿಯ ಸೂಚನೆಯನ್ನು ತರಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

Mr. SPEAKER : He will make marked improvement over that `active consideration'.

ಶ್ರೀಮತಿ ಎನ್. ಜ್ಯೋತಿ ರೆಡ್ಡಿ : ಮಾನ್ಯ ಸಚಿವರು ಗೌರಿಬಿದನೂರು ತಾಲ್ಲೂಕನ್ನು ಬಯಲುಸೀಮೆ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಸೇರಿಸಲು ಕಾನೂನಿಗೆ ತಿದ್ದುಪಡಿ ತರಲು ಒತ್ತಾಯ ಮಾಡುತ್ತೇನೆ.

Mr. SPEAKER : I am with you. I will take up your case.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರು, ಕೃಷಿ ಸಚಿವರು, ನೀವುಗಳೆಲ್ಲರೂ ಒಂದೇ ಕಡೆಯವರು, ಎಲ್ಲವನ್ನು ನೀವುಗಳೇ ಸೇರಿಕೊಂಡು ಮಾಡಿಕೊಂಡು ಹೋಗಿಬಿಡಿ, ನಮ್ಮನ್ನೇನು ಕೇಳುವವರಿಲ್ಲದಂತಾಗುತ್ತಿದೆ; ನಮ್ಮ ಭಾಗ ಕೂಡ ಬಹಳಷ್ಟು ಹಿಂದುಳಿದಿರುವ ಪ್ರದೇಶವಾಗಿದೆ. ಅದನ್ನೇಕೆ ತಾವು ಇದರಲ್ಲಿ ಸೇರಿಸುವುದಿಲ್ಲ? ಅಧ್ಯಕ್ಷರೇ ತಾವು ಸ್ವಲ್ಪ ತಾರತಮ್ಯ ಮಾಡುತ್ತಿದ್ದೀರಿ, ನಾನು ಅದನ್ನು ಗಮನಿಸುತ್ತಿದ್ದೇನೆ!! ತಾವು ಕೋಲಾರದವರೆಲ್ಲರೂ ಇಲ್ಲಿ ಸೇರಿ ಕೊಂಡು ಏನೋ ಮಾಡುತ್ತಿರುವಂತಿದೆ! ಮಂತ್ರಿಗಳು ಕೋಲಾರ, ಅಧ್ಯಕ್ಷರು ಕೋಲಾರ ಸದಸ್ಯರು ಕೋಲಾರದವರು, ಇದೊಂದು ರೀತಿಯಲ್ಲಿ ಕೋಲಾರದವರದ್ದೇ ಏನೋ ನಡೆಯುತ್ತಿರುವಂತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ಕೋಲಾರದವರೆಲ್ಲೂ ಸೇರಿಕೊಂಡು ಏನೊ ಪಿತೂರಿ ಮಾಡುತ್ತಿದ್ದಾರೆ ಎನ್ನತಕ್ಕದನ್ನು ನಾನು ಒಪ್ಪುವುದಿಲ್ಲ. ಕೋಲಾರದವರಾದ ನಾವುಗಳು ಖಂಡಿತವಾಗಿ ಆ ರೀತಿ ಪಿತೂರಿ ಮಾಡತಕ್ಕ ಜನರಲ್ಲ.

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಬಯಲುಸೀಮೆಯ ಕಾರ್ಯವ್ಯಾಪ್ತಿಯಲ್ಲಿ ರೈತರು ಬೆಳೆದಂಥ ಮಾಲುಗಳನ್ನು ತಮ್ಮ ತಮ್ಮ ಸ್ಥಾನಕ್ಕೆ ಮುಟ್ಟಿಸಲು ಅನುವು ಆಗುವ ರೀತಿಯಲ್ಲಿ ರಸ್ತೆಗಳನ್ನು ದುರಸ್ತಿ ಮಾಡುವುದಾಗಲಿ, ರಸ್ತೆಗಳನ್ನು ಮಾಡುವುದಾಗಲೀ ಸೇರಿಸಿ ಕೆಲಸ ಮಾಡುತ್ತಿರೋ?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಿಯಮಾವಳಿಯ ಪ್ರಕಾರ ಶೇಕಡ ಅರವತ್ತರಷ್ಟನ್ನು ನೀರು ಮತ್ತು ಮಣ್ಣಿನ ಫಲವತ್ತತೆಯನ್ನು ಕನರ್ಸವ್ ಮಾಡಲು ಅಂದರೆ ವ್ಯವಸಾಯ ಮತ್ತು ವ್ಯವಸಾಯಕ್ಕೆ ಪೂರಕವಾಗಿರತಕ್ಕ ಉದ್ದೇಶಕ್ಕೆ ಉಪಯೋಗ ಮಾಡಬೇಕು. ಇನ್ನುಳಿದ ನಲವತ್ತರಷ್ಟು ಹಣವನ್ನು ರಸ್ತೆ ಮತ್ತು ಇತರೆ ಕಾಮಗಾರಿಗಳನ್ನು ಮಾಡಲು ಉಪಯೋಗ ಮಾಡಿಕೊಳ್ಳಬಹುದು. ನಿಯಮದ ಆಧಾರದ ಮೇಲೆಯೇ ನಾವು ಹಣವನ್ನು ಖರ್ಚು ಮಾಡುತ್ತೇವೆ.

ಅಂಕೋಲ ತಾಲ್ಲೂಕಿನಲ್ಲಿ ಪಟ್ಟಾ ನೀಡುವ ಬಗ್ಗೆ.

109 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

9521-54